ಮಾಳವಿಕಾ ಆಫೀಸ್‌ನಿಂದ ಮನೆಗೆ ಬಂದಾಗ ಏಳು ಗಂಟೆಯಾಗಿತ್ತು. ಅಶ್ವಿನಿ ಅವಳನ್ನು ಕಾರ್‌ನಲ್ಲಿ ಡ್ರಾಪ್ ಮಾಡಿದ್ದಳು. ಅವಳು ಫ್ರೆಷ್ ಆಗಿ ಬರುವ ವೇಳೆಗೆ ಮಗಳು ಮೇಘಾ ಬ್ರೆಡ್‌ಟೋಸ್ಟ್, ಕಾಫಿ ತಂದಳು. ಮಗ ಓದುತ್ತಾ ಕುಳಿತಿದ್ದ.

'ಅಮ್ಮಾ, ಅಜ್ಜಿ ನಾಲ್ಕು ಸಲ ಫೋನ್ ಮಾಡಿದ್ರು. ನೀನು ಕಾಫಿ ಕುಡಿದು ಫೋನ್ ಮಾಡು.'

'ಏನಾದರೂ ಹೇಳಿದ್ರಾ?'

'ಅವರು ನಮ್ಮ ಹತ್ತಿರ ಏನಾದರೂ ಹೇಳುವುದುಂಟಾ? ನೀನೇ ಫೋನ್ ಮಾಡಿ ವಿಚಾರಿಸು.'

'ನಾಳೆ ಮಾಡ್ತೀನಿ ಬಿಡು.'

'ಅಮ್ಮಾ, ಚಪಾತಿ, ಹೊಸ ತರಹ ಗ್ರೇವಿ ನಾನೇ ಮಾಡ್ತೀನಿ.'

'ಆಯ್ತು ಮಾಡು. ನಾನು ಅಮ್ಮಂಗೆ ಫೋನ್ ಮಾಡ್ತೀನಿ' ಎಂದಳು ಮಾಳವಿಕಾ.

ನಾಲ್ಕು ಸಲ ಫೋನ್ ಮಾಡಿದರೂ ಪರಿಮಳಮ್ಮ ಫೋನ್ ಎತ್ತಲಿಲ್ಲ. ಮಾಳವಿಕಾ ಕಣ್ಮುಚ್ಚಿ ಮಲಗಿದಳು. ತವರಿನ ನೆನಪಾದೊಡನೆ ಮನಸ್ಸಿಗೆ ಒಂದು ರೀತಿ ಖುಷಿಯಾಯಿತು.

ಶೇಷಗಿರಿರಾವ್ ಪಾಲಿಟೆಕ್ನಿಕ್ ಕಾಲೇಜೊಂದರ ಪ್ರಿನ್ಸ್‌ಪಾಲ್ ಆಗಿ ನಿವೃತ್ತಿ ಹೊಂದಿದ್ದರು. ಪರಿಮಳಮ್ಮ ಅವರ ಶಾಂತ ಸ್ವಭಾವಕ್ಕೆ ಸರಿ ಹೊಂದುವಂತಹ ಪತ್ನಿ. ಮಾಳವಿಕಾ ಅವರ ಹಿರಿಯ ಮಗಳು. ಮಾಳವಿಕಾಗೆ ಹತ್ತನೇ ವರ್ಷ ನಡೆಯುತ್ತಿದ್ದಾಗ ಮಾಧವ ಹುಟ್ಟಿದ್ದ. ತನಗಿಂತ ಹತ್ತು ವರ್ಷ ಚಿಕ್ಕವನಾದ ತಮ್ಮನನ್ನು ಕಂಡರೆ ಮಾಳವಿಕಾಗೆ ಪಂಚಪ್ರಾಣ.

ಮಾಳವಿಕಾ ಬುದ್ಧಿವಂತೆ. ಎಂ.ಟೆಕ್. ಮಾಡಿ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಗ ಶೇಷಗಿರಿರಾವ್ ದೂರದ ಸಂಬಂಧಿ ಚಕ್ರಪಾಣಿ ತಮ್ಮ ಮಗ ಶ್ಯಾಮ್‌ಗೆ ಹೆಣ್ಣು ಕೇಳಿಕೊಂಡು ಬಂದಿದ್ದರು. ಶ್ಯಾಮ್ ಕೂಡ ಎಂ.ಟೆಕ್. ಮಾಡಿ ಬಾಂಬೆಯ ಕಂಪನಿಯೊಂದರಲ್ಲಿ ಇಂಜಿನಿಯರ್ ಆಗಿದ್ದ. ಮಾಳವಿಕಾ ಮದುವೆ ನಿಶ್ಚಯವಾಗಿತ್ತು. ಮದುವೆಯಾದೊಡನೆ ಬಾಂಬೆಯ ಕಂಪನಿಯೊಂದರಲ್ಲಿ ಕೆಲಸವೂ ಸಿಕ್ಕಿತ್ತು. ಮದುವೆಯಾದ ಒಂದು ವರ್ಷಕ್ಕೆ ಮೇಘಾ ಹುಟ್ಟಿದ್ದಳು. ಅವಳಿಗೀಗ ಹದಿನೆಂಟು ವರ್ಷ. ಅವಳ ತಮ್ಮ ಮಯೂರ್‌ಗೆ ಹನ್ನೆರಡು ವರ್ಷ. ಮೇಘಾ ಪಿ.ಯು.ಸಿ.ಯಾಗುತ್ತಿದ್ದಂತೆ ತಾಯಿಗೆ ಹೇಳಿದ್ದಳು. 'ನನಗೆ ಸಾಹಿತ್ಯದಲ್ಲಿ ಆಸಕ್ತಿ ಇದೆ. ನಾನು ಇಂಗ್ಲಿಷ್ ಎಂ.ಎ. ಮಾಡ್ತೀನಿ.'

'ಪಿ.ಯು.ಸಿ.ಯಲ್ಲಿ ಸೈನ್ಸ್ ಯಾಕೆ ತೆಗೆದುಕೊಂಡೆ?'

'ನಿಮ್ಮ ಬಲವಂತಕ್ಕೆ ತೆಗೆದುಕೊಂಡೆ. ನನಗೆ ಸೈನ್ಸ್ ಇಷ್ಟವಿಲ್ಲ. ನನ್ನ ಒತ್ತಾಯ ಮಾಡಬೇಡಿ.'

ಮೇಘಾ ಈಗ ಮೊದಲನೇ ವರ್ಷದ ಎಂ.ಎ.ಯಲ್ಲಿ ಕಲಿಯುತ್ತಿದ್ದಳು.

ಫೋನ್ ರಿಂಗಾದಾಗ ಮಾಳವಿಕಾ ಕಾಲ್ ರಿಸೀವ್ ಮಾಡಿ ಕೇಳಿದಳು. 'ಯಾರ ಜೊತೆ ಮಾತಾಡ್ತಿದ್ದೆ?'

'ನನ್ನ ಫ್ರೆಂಡ್ ರುಕ್ಕು ಜೊತೆ.'

'ಓ. ಯಾಕಮ್ಮ ನಾಲ್ಕು ಸಲ ಫೋನ್ ಮಾಡಿದ್ದೆ?'

'ಮಾಧವಂಗೆ ಮದುವೆ ಗೊತ್ತಾಯ್ತು ಕಣೆ. ಹುಡುಗೀನೂ ಇಂಜಿನಿಯರ್. ನೋಡಕ್ಕೆ ತುಂಬಾ ಮುದ್ದಾಗಿದ್ದಾಳೆ. ತಂದೆ ಬ್ಯಾಂಕ್ ಮ್ಯಾನೇಜರ್. ಡಿಸೆಂಬರ್‌ನಲ್ಲಿ ರಿಟೈರ್ ಆಗ್ತಾರೆ. ಒಬ್ಬ ಅಕ್ಕ ಇದ್ದಾಳೆ. ಅವಳಿಗೆ ಮದುವೆಯಾಗಿ ಗೋವಾದಲ್ಲಿದ್ದಾಳೆ.'

'ಮಾಧವ ಒಪ್ಪಿದ್ದಾನಾ? ಅಥವಾ ನೀನು ಕನಸು ಕಾಣ್ತಿದ್ದೀಯೋ?'

'ಅವನ ಒಪ್ಪಿಗೆ ತಿಳಿದಮೇಲೆ ನಿನಗೆ ಫೋನ್ ಮಾಡ್ತಿರೋದು. ನೀನು ಯಾವಾಗ ಬರ್ತೀಯ ಹೇಳು.'

'ಎಂಗೇಜ್‌ಮೆಂಟ್ ದಿನ ಗೊತ್ತು ಮಾಡಿ. ಆಗ ಬರ್ತೀನಿ.'

'ಎಂಗೇಜ್‌ಮೆಂಟ್ ಮೊದಲು ನೀನು ಹುಡುಗೀನ್ನ ನೋಡಲ್ವಾ?'

'ನನಗೆ ರಜ ಸಿಗಲ್ಲಮ್ಮ. ನೀವೆಲ್ಲಾ ಒಪ್ಪಿದ್ದೀರಲ್ಲಾ ಸಾಕು. ಮುಖ್ಯವಾಗಿ ಮಾಧವನಿಗೆ ಇಷ್ಟವಾಗಿದ್ರೆ ಸಾಕು. ಬೇರೆಯವರ ಒಪ್ಪಿಗೆ ಅನವಶ್ಯಕ.'

'ನೀನು, ನಿನ್ನ ಗಂಡ, ಮಕ್ಕಳು ಎಲ್ಲರೂ ಬರಬೇಕು.'

'ಖಂಡಿತ ಬರ್ತೀವಿ. ಹುಡುಗಿ ಹೆಸರೇನಮ್ಮ?' ಮಾಳವಿಕಾ ಕುತೂಹಲದಿಂದ ಕೇಳಿದಳು.

'ಚಿನ್ನೂಂತ ಕೂಗ್ತಿದ್ರು ಕಣೆ. ಅವಳ ಹೆಸರನ್ನೇ ಕೇಳಲಿಲ್ಲ.'

'ಅಮ್ಮ, ಮಾಧವಂಗೆ ಫೋಟೊ ಕಳಿಸಲು ಹೇಳು. ನಾನು ನಾಳೆ ಅವನ ಜೊತೆ ಮಾತಾಡ್ತೀನಿ.'

'ಆಗಲಿ ಕಣೆ. ಮಕ್ಕಳೆಲ್ಲಾ ಚೆನ್ನಾಗಿದ್ದಾರಾ?'

'ಎಲ್ಲರೂ ಚೆನ್ನಾಗಿದ್ದಾರೆ. ಮೊದಲು ನಿನ್ನ ಸೊಸೆಯಾಗುವವಳ ಹೆಸರು ತಿಳಿದುಕೋಮ್ಮ.'

'ಆಗಲಿ ಕಣೆ' ಎಂದರು ಪರಿಮಳಮ್ಮ.

ಮರುದಿನ ರಾತ್ರಿ ಮಾಧವ ಫೋನ್ ಮಾಡಿದ.

'ಕಂಗ್ರಾಟ್ಸ್ ಕಣೋ...'

'ಥ್ಯಾಂಕ್ ಯು ಅಕ್ಕ.'

'ಏನೋ ನಿನ್ನ ಉಡ್ ಬಿ ಹೆಸರು?'

'ಪ್ರಿಯಾ. ನನಗಂತೂ ತುಂಬಾ ಇಷ್ಟವಾಗಿದ್ದಾಳೆ. ಆದಷ್ಟು ಬೇಗ ಮದುವೆ ಮಾಡಿಕೊಳ್ಳೀಂತ ಹುಡುಗಿ ಮನೆಯವರು ಒತ್ತಾಯಿಸ್ತಿದ್ದಾರೆ.'

'ಪ್ರಿಯಾಳ ಫೋಟೊ ಕಳಿಸೋ.'

'ಕಳಿಸ್ತೀನಿ ಅಕ್ಕ' ಎಂದ ಮಾಧವ ತಕ್ಷಣ ತನ್ನ ಕೈ ಹಿಡಿಯುವವಳ ಮೂರು ಫೋಟೊ ಕಳಿಸಿದ.

ಹುಡುಗಿ ತುಂಬಾ ಮುದ್ದಾಗಿದ್ದಳು. ತನ್ನ ತಮ್ಮನಿಗೆ ಸರಿಯಾದ ಜೋಡಿ ಅನ್ನಿಸಿತು. ಆ ಫೋಟೊ ನೋಡುತ್ತಿದ್ದಂತೆ ಅವಳ ತಲೆಯಲ್ಲಿ ಮಿಂಚು ಹೊಳೆದಂತಾಯಿತು. ಅವಳ ಮನಸ್ಸಿಗೆ 'ಈ ಹುಡುಗಿಯನ್ನು ಎಲ್ಲೋ ನೋಡಿದ್ದೇನೆ' ಎನ್ನಿಸತೊಡಗಿತು. ಎಷ್ಟು ನೆನಪು ಮಾಡಿಕೊಂಡರೂ ಗೊತ್ತಾಗಲಿಲ್ಲ. ತಲೆಗೆ ಏನೂ ಹೊಳೆಯಲಿಲ್ಲ. ಮಗಳ ಬಳಿಯೂ ಈ ವಿಚಾರ ಹೇಳಿದಳು.

'ಅಮ್ಮಾ, ನೀನು ಬಾಂಬೆಯಲ್ಲಿದ್ದೀಯ. ದಿನಾ ಮೆಟ್ರೋನಲ್ಲಿ ಓಡಾಡುವಾಗ ನೂರಾರು ಜನರನ್ನು ನೋಡಿರ್ತೀಯ. ಮುದ್ದಾಗಿರುವ ಹುಡುಗಿಯ ಚಿತ್ರ ನಿನ್ನ ಮನಸ್ಸಿನಲ್ಲಿದೆ. ಅವಳ ತರಹಾನೇ ಈ ಪ್ರಿಯಾ ಕಾಣಿಸ್ತಿರಬಹುದು.'

'ಇಲ್ಲ ಕಣೆ...'

'ಅಮ್ಮ, ನೀನು ತಲೆ ಕೆಡಿಸಿಕೊಂಡು ನಮ್ಮ ತಲೆಯನ್ನು ಕೆಡಿಸಬೇಡ. ಸಂತೋಷವಾಗಿ ಎಂಗೇಜ್‌ಮೆಂಟ್‌ಗೆ ಹೋಗಿಬರೋಣ' ಎಂದಳು ಮೇಘಾ.

'ನಿಮ್ಮಮ್ಮಂಗೆ ಬೇಜಾರು ಮೇಘಾ' ಎಂದ ಶ್ಯಾಮ್.

'ಬೇಜಾರು ಯಾಕೆ?'

'ಬಹುಶಃ ನಿನ್ನನ್ನು ಮಾಧವಂಗೆ ಕೊಡಬೇಕು ಅನ್ನುವ ಆಸೆ ಇತ್ತೂಂತ ಕಾಣತ್ತೆ.'

'ಇಲ್ಲದ್ದೆಲ್ಲಾ ಹೇಳಬೇಡಿ. ನಾನು ಯಾವತ್ತೂ ಆ ರೀತಿ ಯೋಚಿಸಿದವಳಲ್ಲ. ರಕ್ತ ಸಂಬಂಧಿಗಳಲ್ಲಿ ಮದುವೆ ಒಳ್ಳೆಯದಲ್ಲಾಂತ ನನಗೂ ಗೊತ್ತು.'

'ಅಮ್ಮ–ಪಪ್ಪ, ನಾನು ಇನ್ನು ನಾಲ್ಕು ವರ್ಷ ಮದುವೆಯಾಗಲ್ಲ. ನನ್ನ ಅಭಿರುಚಿಗೆ ತಕ್ಕಂತಹ ಹುಡುಗ ಸಿಕ್ಕಿದ ಮೇಲೇ ಮದುವೆ.'

'ನಾವಿಬ್ಬರೂ ನಿನ್ನ ಮದುವೆ ಮಾಡಕ್ಕೆ ತುದಿಗಾಲಿನಲ್ಲಿ ನಿಂತಿಲ್ಲ. ನೆಮ್ಮದಿಯಾಗಿ ಓದಿಕೊಂಡಿರು' ಎಂದಳು ಮಾಳವಿಕಾ.

'ಅಮ್ಮ, ಎಂಗೇಜ್‌ಮೆಂಟ್ ಹಿಂದಿನ ದಿನ ನಾವು ಮೂವರೂ ಬರ್ತೀವಿ. ನೀನು ಒಂದು ವಾರ ಮೊದಲು ಹೋಗಿ ನಿಮ್ಮಮ್ಮನಿಗೆ ಸಹಾಯ ಮಾಡು. ನಿನಗೂ ನೆಮ್ಮದಿ. ಅವರಿಗೂ ನೆಮ್ಮದಿ. ನಮಗೂ ನೆಮ್ಮದಿ.'

'ನಿನ್ನ ನೆಮ್ಮದಿ ಕೆಡಿಸುವಂತಹ ಕೆಲಸ ನಾನೇನು ಮಾಡ್ತಿದ್ದೀನಿ?' ಮಾಳವಿಕಾ ಸಿಡುಕಿದಳು.

'ಮಾವನ ಮದುವೆ ಗೊತ್ತಾದ ಕ್ಷಣದಿಂದ ನೀನು ಮಾಮೂಲಿನಂತಿಲ್ಲ. ಕಾರಣವಿಲ್ಲದೆ ನಮ್ಮ ಮೇಲೆ ಸಿಡುಕ್ತಿರ್ತೀಯ. ಯಾವುದೋ ಆತಂಕ ನಿನ್ನನ್ನು ಕಾಡ್ತಿದೆ. ಮಯೂರ್ ಕೂಡ ನಿನ್ನೆ, ಅಮ್ಮ ಯಾಕೆ ಹೀಗೆ ಆಡ್ತಿದ್ದಾಳೆ?' ಅಂತ ಕೇಳಿದ.

ಮಾಳವಿಕಾ ಶನಿವಾರ – ಭಾನುವಾರ ಸೇರಿಸಿಕೊಂಡು ಒಂದು ವಾರ ಮೊದಲೇ ಹೊರಟಳು. ಮಾಧವ ಬಂದು ಅಕ್ಕನನ್ನು ಸ್ವಾಗತಿಸಿ ಮನೆಗೆ ಕರೆದೊಯ್ದ.

'ಅಕ್ಕ, ಇವತ್ತು ಸಾಯಂಕಾಲ ನಾನು, ನೀನು ಪ್ರಿಯಾ ಮನೆಗೆ ಹೋಗಿಬರೋಣ. ನಿನಗೂ ಅವಳು ಇಷ್ಟವಾಗ್ತಾಳೆ ಅನ್ನುವ ನಂಬಿಕೆ ನನಗಿದೆ.'

'ಆಗಲಿ, ಹೋಗಿ ಬರೋಣ. ನನಗೂ ಅವಳನ್ನು ನೋಡುವ ಕುತೂಹಲವಿದೆ.'